ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ವಿರಾಜಪೇಟೆ

ಓ.ಎಸ್ **.ನಂಃ 91/2021**

| | | |
|---|---|---|
| ಸಾಕ್ಷಿದಾರರ ಹೆಸರು | ಡಿ.ಆರ್ ರೂನ್ಸಿ | ಪಿಡಬ್ಲ್ಯೂ-4 |
| ಗಂಡನ ಹೆಸರು | ಅರವಿಂದ್ | |
| ವಯಸ್ಸು | 34 ವರ್ಷ | |
| ವೃತ್ತಿ | ವಕೀಲರು | |
| ವಾಸಸ್ಥಳ | ಕುಟ್ಟ ಗ್ರಾಮ. | |

ದಿನಾಂಕಃ 09.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಡಿ.ಡಿ ರವರಿಂದಃ

ನಾನು 2012 ರಿಂದ ಪೊನ್ನಂಪೇಟೆ ಮತ್ತು ವಿರಾಜಪೇಟೆ ನ್ಯಾಯಾಲಯದಲ್ಲಿ ವಕೀಲ ವೃತ್ತಿಯನ್ನು ಮಾಡುತ್ತಿದ್ದೇನೆ. ನಾನು ಹಿರಿಯ ವಕೀಲರಾದ ಎಸ್ ಡಿ ಕಾವೇರಪ್ಪ ರವರ ಬಳಿ ವಕೀಲ ವೃತ್ತಿಯನ್ನು ಪ್ರಾರಂಭಿಸಿರುತ್ತೇನೆ. ನಾನು ಅವರ ಕಛೇರಿಯಲ್ಲಿ 2019 ರ ವರೆಗೆ ಕಿರಿಯ ವಕೀಲೆಯಾಗಿ ಕಾರ್ಯ ನಿರ್ವಹಿಸಿದ್ದೆನು. ನಿಶಾನೆ ಪಿ 19 ದಾಖಲೆಯಲ್ಲಿ ನಾನು ದಸ್ತಾವೇಜು ಬರಹಗಾರಳಾಗಿ ಸಹಿ ಮತ್ತು ಮೊಹರನ್ನು ಹಾಕಿರುತ್ತೇನೆ. ನಿ.ಪಿ 19 ಕ್ರಯಪತ್ರವನ್ನು ಪತ್ರ ಬರಹಗಾರರಾದ ಜಯಂತಿ ರವರು ತಯಾರಿಸಿರುತ್ತಾರೆ. ಆ ಸಮಯದಲ್ಲಿ ನನ್ನ ಹಿರಿಯ ವಕೀಲರ ಕಛೇರಿಯಲ್ಲಿ ಕನ್ನಡದಲ್ಲಿ ದಾಖಲೆಗಳನ್ನು ಬೆರಳಚ್ಚು ಮಾಡುತ್ತಿರಲಿಲ್ಲ. ಪತ್ರ ಬರಹಗಾರರಾದ ಜಯಂತಿರವರು ಕೋರಿಕೊಂಡ ಮೇರೆಗೆ ನಾನು ನಿ.ಪಿ 19

ದಾಖಲೆಗೆ ಅವರ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ಜಯಂತಿ ರವರ ಪರವಾನಗಿ ನವೀಕರಣಗೊಂಡಿಲ್ಲದೇ ಇದುದ್ದರಿಂದ ಅವರು ತಯಾರಿಸಿದ ದಾಖಲೆಗಳಿಗೆ ನಾನು ದಸ್ತಾವೇಜು ಬರಹಗಾರಳಾಗಿ ಸಹಿ ಮತ್ತು ಮೊಹರನ್ನು ಹಾಕಿರುತ್ತೇನೆ.

ನಿ.ಪಿ **19** ದಾಖಲೆಗೆ ಸಹಿ ಮಾಡುವ ಮೊದಲು ಅದರ ಒಕ್ಕಣೆಗಳನ್ನು ಓದಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯ ಪಕ್ಷಗಾರರು ಜಯಂತಿ ರವರ ಕಛೇರಿಯಲ್ಲಿ ಇದ್ದರು. ನಾನು ಜಯಂತಿರವರ ಕಛೇರಿಗೆ ಹೋಗುವಷ್ಟರಲ್ಲಿ ನಿ.ಪಿ **19** ದಾಖಲೆಯ ಪಕ್ಷಗಾರರು ಮತ್ತು ಸಾಕ್ಷಿದಾರರು ಸದರಿ ದಾಖಲೆಗೆ ಸಹಿ ಮಾಡಿದ್ದರು.

ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂಃ ವಿರಾಜಪೇಟೆ.